





ರಕ್ತವನ್ನು ಹೃದಯದ ಸ್ನಾಯುಗಳ ಸುತ್ತ ರಕ್ತ ಸಂಚಾರಕ್ಕೆ ಹೊಸ ಮಾರ್ಗ ರೂಪಿಸುತ್ತದೆ. ಇದು ತೆರೆದ ಹೃದಯ ಚಿಕಿತ್ಸೆಯಲ್ಲಿ ಸಾಮಾನ್ಯ ವಿಧಾನ. ಬ್ಲಾಕೇಜ್‌ಗಳನ್ನು ಸರಿಪಡಿಸಲು ಇದರಲ್ಲಿ ಅವಕಾಶವಿದೆ. ಈ ಸರ್ಜರಿ ನಡೆಸುವ ವೈದ್ಯರನ್ನು ಕಾರ್ಡಿಯೊಥೊರಾಸಿಸ್ ಸರ್ಜನ್ ಎಂದು ಕರೆಯುತ್ತಾರೆ.

ಈ ವಿಧಾನವನ್ನು ಬೈಪಾಸ್ ಸರ್ಜರಿ, ಕೊರೊನರಿ ಆರ್ಟರೀ ಬೈಪಾಸ್ ಸರ್ಜರಿ ಮತ್ತು ಹಾರ್ಟ್ ಬೈಪಾಸ್ ಸರ್ಜರಿ ಎಂದೂ ಗುರುತಿಸುತ್ತಾರೆ.

**ರೋಗಿಗೆ ಅನನುಕೂಲ: ಸೀಳಿದ ಎದೆಯಲುಬು ಹಂದರ ಕೂಡಿಕೊಳ್ಳಲು ತಿಂಗಳುಗಳೇ ಬೇಕು. ಅಧಿಕ ಔಷಧೋಪಚಾರದ ಅಗತ್ಯವಿರುತ್ತದೆ. ಎಂದಿನ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದಕ್ಕೆ ಅಧಿಕ ಕಾಲ ಬೇಕು.**

ಈ ಚಿಕಿತ್ಸೆಯಿಂದ ರಕ್ತನಾಳಗಳಲ್ಲಿ ರಕ್ತಪರಿಚಲನೆ ಸುಧಾರಣೆಯಾಗುತ್ತದೆ. ಹೃದಯಾಘಾತದಿಂದ ತತ್ತರಿಸಿದ ಹೃದಯಕ್ಕೆ ರಕ್ತವನ್ನು ಪಂಪ್ ಮಾಡುವ ಶಕ್ತಿ ವರ್ಧನೆಯಾಗುತ್ತದೆ. ಮತ್ತೆ ಹೃದಯಾಘಾತ ಸಂಭವಿಸುವ ಸಾಧ್ಯತೆ ಕಮ್ಮಿಯಾಗುತ್ತದೆ. ಕಸಿ ಮಾಡಿದ ರಕ್ತನಾಳವೂ ಕಟ್ಟಿಕೊಳ್ಳುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಆಗ ಮತ್ತೆ ಸರ್ಜರಿಯ ಅಗತ್ಯ ಬೀಳುತ್ತದೆ. ಕಸಿ ಮಾಡಿದ ರಕ್ತನಾಳ ಹೊರತುಪಡಿಸಿ ಮತ್ತಿನ್ನೆಲ್ಲೋ ರಕ್ತನಾಳ ಕಟ್ಟಿಕೊಳ್ಳುವ ಸಾಧ್ಯತೆಯೂ ಇರುತ್ತದೆ. ಅದನ್ನು ತಡೆಯಲು ಮುನ್ನೆಚ್ಚರಿಕೆಯ ಕ್ರಮವಾಗಿ ಜೀವನಶೈಲಿ ಬದಲಾವಣೆ, ಔಷಧಿ ಸೇವನೆ ಇತ್ಯಾದಿ ಮಾರ್ಗಗಳ ಮೂಲಕ ಅಂಥ ಅನಾಹುತ ಆಗುವುದನ್ನು ತಪ್ಪಿಸಬಹುದು.

## ಆಫ್-ಪಂಪ್ ಕೊರೊನರಿ ಆರ್ಟರಿ ಬೈಪಾಸ್ ಗ್ರಾಫ್ಟಿಂಗ್

ಇದು ಕೂಡ ಮೊದಲಿನಂತೆ ಸಾಮಾನ್ಯ ವಿಧಾನ. ಇಲ್ಲಿಯೂ ಎದೆಯೆಲುಬು ಸೀಳಿಯೇ ಹೃದಯಕ್ಕೆ ಪ್ರವೇಶಿಕೆ ಸಾಧ್ಯ. ಆದರೆ ಇಲ್ಲಿ ಹೃದಯ–ಶ್ವಾಸಕೋಶ ಬೈಪಾಸ್ ಮಷಿನ್ ಅನ್ನು ಬಳಸುವುದಿಲ್ಲ. ಇದನ್ನು ಬೀಟಿಂಗ್ ಹಾರ್ಟ್ ಬೈಪಾಸ್ ಗ್ರಾಫ್ಟಿಂಗ್ ಎಂದೂ ಕರೆಯುತ್ತಾರೆ.

## ಹಾರ್ಟ್ ಲಂಗ್ ಮಷಿನ್

ಶಸ್ತ್ರಚಿಕಿತ್ಸೆ ಮಾಡುವಾಗ ಹೃದಯ ಸ್ಥಗಿತಗೊಳಿಸಿ ದೇಹದ ಹೊರಭಾಗದಿಂದ ಅಂದರೆ 'ಹಾರ್ಟ್ ಅಂಡ್ ಲಂಗ್ಸ್ ಮಷಿನ್'ನಿಂದ ದೇಹಕ್ಕೆ ಕೃತಕವಾಗಿ ಆಕ್ಸಿಜನ್‌ಯುಕ್ತ ರಕ್ತ ಪೂರೈಸುವುದು ಮತ್ತು ಕೆಟ್ಟ ರಕ್ತವನ್ನು ಹೊರಕ್ಕೆ ತೆಗೆಯುವುದು ಮಾಡುತ್ತ ಹೃದಯ ಶಸ್ತ್ರಚಿಕಿತ್ಸೆ ಮಾಡುತ್ತಾರೆ.

ದೇಹದ ಮೇಲಿನ ಭಾಗವನ್ನು ಕೆಳಗಿನ ಭಾಗಕ್ಕೆ ಸೇರಿಸುವ ತೊಡೆಯ ಭಾಗದಲ್ಲಿ ದೊಡ್ಡ ಫೆಮೊರಲ್ ಆರ್ಟರೀ ಮತ್ತು ಫೆಮೊರಲ್ ವೇನ್ ಗುರುತಿಸಿ ಅದಕ್ಕೆ 'ಕ್ಯಾನುಲರಿ ಟ್ಯೂಬ್' ಜೋಡಿಸಲಾಗುತ್ತದೆ. ಒಂದರಿಂದ ಆಕ್ಸಿಜನ್‌ಯುಕ್ತ ರಕ್ತ ಹೋಗುವುದು, ಇನ್ನೊಂದರಿಂದ ರಕ್ತ ಹೊರಬರುವ ವ್ಯವಸ್ಥೆ ಇದು. ಇದಕ್ಕಾಗಿ ಬಳಸಿ ಬಿಸಾಕಬಲ್ಲ ವಸ್ತುಗಳನ್ನು (Disposable items) ಬಳಸಲಾಗುತ್ತದೆ. ಕನಿಷ್ಠ ನಲವತ್ತು ಸಾವಿರ ರೂಪಾಯಿ ಮೌಲ್ಯದ ವಸ್ತುಗಳಿವು. ಇವುಗಳನ್ನು ಒಮ್ಮೆ ಮಾತ್ರ ಬಳಸಬಹುದು.

ಈ ಮಷಿನ್‌ಗೆ 50ರಿಂದ 70 ಲಕ್ಷ ರೂಪಾಯಿ ಬೆಲೆ. ಶಸ್ತ್ರಚಿಕಿತ್ಸೆಯ ವೇಳೆ ಈ ಕಾರ್ಯವನ್ನು ಚೀಫ್ ಕ್ಲಿನಿಕಲ್ ಪರ್ಫ್ಯೂಸಿಯನಿಸ್ಟ್ ನಿರ್ವಹಿಸುತ್ತಾರೆ. ಇವರನ್ನು ವೈದ್ಯರು ಅಥವಾ ಸರ್ಜನ್ ಎನ್ನದೇ ತಜ್ಞರೆಂದು ಪರಿಗಣಿಸುತ್ತಾರೆ ಎಂದು ಅಪೊಲೊ ಆಸ್ಪತ್ರೆಯ ಚೀಫ್ ಕ್ಲಿನಿಕಲ್ ಪರ್ಫ್ಯೂಸಿಯನಿಸ್ಟ್ ಸೇಂಥಿಲ್ ಕುಮಾರನ್ ವಿವರಿಸಿದರು.



ಸೇಂಥಿಲ್ ಕುಮಾರನ್

ಸಮೇತ ಥಿಯೇಟರ್‌ನಿಂದ ಹೊರನಡೆದರು. ನೋಡ ನೋಡುತ್ತಿದ್ದಂತೆ ರೋಗಿಯನ್ನು ಸ್ಟ್ರೆಚರ್ ಮೇಲೆ ಮಲಗಿಸಿದ ಸಹಾಯಕ ಸಿಬ್ಬಂದಿ ಟ್ರಾಲಿ ತಳ್ಳುತ್ತ ವಾರ್ಡ್‌ಗೆ ಸಾಗಿಸಿದರು.

ನಮಗೆಲ್ಲ ಮನುಷ್ಯನೊಳಗಿನ ಹೊಸ ಜಗತ್ತು ಸುತ್ತಿ ಬಂದ ಹಾಗಾಗಿತ್ತು. ಆ ತನಕ ನಾವು ನೋಡಿದ್ದ ಆ ದೇಹದ ಸೀಳು, ರಕ್ತ, ಹೊಲಿಗೆ ಇತ್ಯಾದಿ ಪರಪಂಚದಿಂದ ಹೊರಬರಲು ಹೆಣಗುತ್ತಿದ್ದರೆ, ಅತ್ತ ಸರ್ಜನ್ ಎರಡನೇ ಆಪರೇಷನ್‌ಗೆ ರೆಡಿಯಾಗಿದ್ದರು! ಒಂದು ಗ್ರೂಪ್ ಫೋಟೊ ಕ್ಲಿಕ್ಕಿಸಿಕೊಂಡೆವು. ನಮ್ಮ ಕ್ಯಾಮೆರಾದ ಮೇಲೆ ಸರ್ಜನ್ ಕಣ್ಣು ಬಿತ್ತು. ಅದನ್ನೆತ್ತಿಕೊಂಡವರೇ 'ಕೆನಾನ್‌ನಲ್ಲಿ ಹೊಸದೊಂದು ಮಾಡೆಲ್ ಬಂದಿದೆ ಗೊತ್ತೇ?' ಎಂದು ಕ್ಯಾಮರಾ ಲೆನ್ಸ್ ದುನಿಯಾದ ಬಗ್ಗೆ ವಿವರಿಸಿ ಅಚ್ಚರಿಗೊಳಿಸಿದರು. ಮತ್ತೊಂದೆಡೆ ಕೊಲ್ಲಿ ರಾಷ್ಟ್ರದಿಂದ ಬಂದ ರೋಗಿಯೊಬ್ಬ ಸ್ಟ್ರೆಚರ್‌ನಲ್ಲಿ ಮಲಗಿದ್ದ. 'ಡಾ. ಸಾತ್ವಕಿ, ನಿಮ್ಮ ನೆಕ್ಸ್ಟ್ ಪೇಷೆಂಟ್ ಇವರೇನಾ' ಎಂದೆ. 'ನೋ, ಇವರು ಮೂರನೇ ಪೇಷೆಂಟ್. ನನ್ನ ಮುಂದಿನ ಸರ್ಜರಿಗೆ ಆಗಲೇ ಓಟಿ ರೆಡಿಯಾಗಿದೆ' ಅಂದರು. ಆ ಮೂರನೆಯ ರೋಗಿಯ ಬಳಿ ತೆರಳಿದೆ. ಅಲ್ಲಿಗೆ ಸರ್ಜನ್ ಬಂದವರೇ – 'ಇವರು ಕತಾರ್‌ನವರು, ಸರ್ಜರಿ ಇಲ್ಲೇ ಮಾಡಿಸಿಕೊಳ್ಳಬೇಕೆಂದು ಬಂದಿದ್ದಾರೆ' ಎಂದರು. ಕುಶಲ ಸಮಾಚಾರ ಕೇಳಿದ ಸರ್ಜನ್‌ಗೆ, 'ಸರ್, ನೀವು ನನಗೆ ಮತ್ತೊಂದು ಹೃದಯ ಕೊಟ್ಟರೆ ಮತ್ತೆ ನಗ್ತಾ ಬಾಳಬಲ್ಲೆ. ನಿಮಗಾಗಿ ಕಾತರದಿಂದ ಕಾಯುತ್ತಿದ್ದೇನೆ. ಆ ಅಲ್ಲಾಹು ನಿಮ್ಮನ್ನು ಹರಸಲಿ' ಎಂದು ಆ ವ್ಯಕ್ತಿ ಹರಕು ಇಂಗ್ಲಿಷ್‌ನಲ್ಲಿ ಹೇಳಿದರು. ಸರ್ಜನ್ ಮೇಲಿನ ಅಪಾರ ವಿಶ್ವಾಸ ಮತ್ತು ನಿರೀಕ್ಷೆ ಆ ಕಂಗಳಲ್ಲಿತ್ತು.

'ಓಕೆ, ನಾನಿನ್ನು ಬರ್ತೀನಿ, ಸಿಗೋಣ' ಎಂದು ಡಾ. ಸಾತ್ವಕಿ ಆಪರೇಷನ್ ಥಿಯೇಟರ್ ಕಡೆ ಹೆಜ್ಜೆ ಹಾಕಿದರು. ಅದೇ ಸ್ಫೂರ್ತಿ, ಬದ್ಧತೆ, ಸಂಕಲ್ಪ, ಏಕಾಗ್ರತೆ, ಡಿಟರ್ಮಿನೇಷನ್ ಆ ಹೆಜ್ಜೆಗಳಲ್ಲಿ ಕಾಣಿಸಿತು. ಮನುಷ್ಯರೂಪ ತಳೆದ ಹೃದಯವೊಂದು ನಮ್ಮೆದುರು ನಡೆದುಹೋದಂತಾಯಿತು. ●